ಸದನ ನಡೆಯುವಂಥ ಕಾಲದಲ್ಲಿ ಎರಡು ನಿಮಿಷಗಳ ಕಾಲ ಬಿಡುವನ್ನು ಮಾಡಿಕೊಂಡು ನಿಮ್ಮ ಮುಖದರ್ಶನವನ್ನು ನಮ್ಮ ಫೋಟೋಗ್ರಾಫರ್‌ಗೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ದಯವಿಟ್ಟು ಗ್ರೂಪ್ ಫೋಟೋ ತೆಗೆಸಿದರೆ ಪ್ರಾಬ್ಲಮ್ ಸಾಲ್ವ್ ಆಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ನಾನು ಸಭಾ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ವಿರೋಧಪಕ್ಷದ ನಾಯಕರು, ನಾನು, ವಾಟಾಳ್ ನಾಗರಾಜ್ ಎಲ್ಲರೂ ಇರುವಂತೆ ಒಂದು ಗ್ರೂಪ್ ಫೋಟೋ ಹಾಕಿಸಬೇಕೆಂದು ನನಗೆ ತಿಳಿದಹಾಗೆ ದೆಹಲಿಯಲ್ಲಿ ಪಾರ್ಲಿಮೆಂಟ್ ಸೇರಿದಹಾಗೆ ಸೆಷನ್ ಪ್ರಾರಂಭವಾಗಿ, ಎಲೆಕ್ಷನ್ ಆಗಿ ಆರು ತಿಂಗಳು ಆದಾಗ ಒಂದು ಗ್ರೂಪ್ ಫೋಟೋ ತೆಗೆಸುತ್ತಾರೆ. ಹಾಗೆಯೇ ನಮ್ಮ ಒಂದು ಗ್ರೂಪ್ ಫೋಟೋ ತೆಗೆಸಿ. ಇದರ ಬಗ್ಗೆ ಬೇರೆ ಏನೂ ಅರ್ಥ ಕಲ್ಪಿಸಿಕೋಳ್ಳುವಂಥದ್ದು ಬೇಡ. ಬಹಳಷ್ಟು ಜನ ಲೋಕಸಭೆ ಎಲೆಕ್ಷನ್‌ನಲ್ಲಿ ಗೆದ್ದು ಹೋಗಬಹುದು. ಲೋಕಸಭೆಯಲ್ಲಿ ಏನು ಆಗುತ್ತದೆ ಗೊತ್ತಿಲ್ಲ. ಗ್ರೂಪ್ ಫೋಟೋ ತೆಗೆಸಲು ಅಧ್ಯಕ್ಷರಿಗೆ ತಾವು ಸಮ್ಮತಿ ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸಿಂಧ್ಯರವರು ಗ್ರೂಪ್ ಫೋಟೋ ತೆಗೆಸಲು ಹೊರಟಿದ್ದಾರೆ. ಸಿಂಧ್ಯರವರ ಹತ್ತಿರ ಕುಳಿತರೆ ನಾನು ಕಾಣುತ್ತೇನೆಯೇ? ಕಾಣುವುದಿಲ್ಲ. ಆದುದರಿಂದ ದಯವಿಟ್ಟು ಇಂಡಿವಿಜುಯಲ್ ಫೋಟೋ ತೆಗೆಸುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಫೋಟೋ ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ನಮ್ಮ 'Who is Who' ಕಿರುಹೊತ್ತಿಗೆಗಾಗಿ.

ಶ್ರೀ ವಾಟಾಳ್ ನಾಗರಾಜ್ : ನನಗೇಕೋ ಸಂಶಯ ಬರುತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಗ್ರೂಪ್ ಫೋಟೋ ತೆಗೆಸುತ್ತಿರುವುದನ್ನು ನೋಡಿದರೆ ತಾವು ಮುಖ್ಯಮಂತ್ರಿಗಳಾಗಬೇಕು ಸಭೆಯು ವಿಸರ್ಜನೆಯಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಮನಸ್ಸಿನಲ್ಲಿ ಆ ರೀತಿ ಇದ್ದರೆ ತಾವು ದಯವಿಟ್ಟು ಅದನ್ನು ಸಭೆಗೆ ತಿಳಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ನಿಮ್ಮದು ಯಾವಾಗಲೂ ತಪ್ಪು ಗ್ರಹಿಕೆ ತಾನೆ.

ಶ್ರೀ ವಾಟಾಳ್ ನಾಗರಾಜ್ : ಹರ ಕೊಲ್ಲುವಾಗ ಪರ ಕಾಯುವನೆ.. ಅಧ್ಯಕ್ಷರೆ, ತಾವೇ ನಮ್ಮ ಬಗ್ಗೆ ಈ ರೀತಿಯಾದ ತೀರ್ಮಾನಕ್ಕೆ ಬಂದರೆ, ನಮ್ಮ ಹಣೆಬರಹ ಏನು ಸ್ವಾಮಿ?

ಅಧ್ಯಕ್ಷರು : ತಾವು ಇರಲಿಲ್ಲ ವಾಟಾಳ್ ನಾಗರಾಜ್‌ರವರೆ. ನಮ್ಮ ಕಿರುಹೊತ್ತಿಗೆಗೆ ಇಂಡಿವಿಜುಯಲ್ ಫೋಟೋಗಳು ಬೇಕು ಎಂದು ಹೇಳಿದ್ದಾರೆ. ನಮ್ಮ ಫೋಟೋಗ್ರಾಫರ್ ಕಳೆದ 2 ದಿವಸದಿಂದ ರೀಡಿಂಗ್ ರೂಮ್‌ನಲ್ಲಿ ಕಾಯುತ್ತಿದ್ದಾರೆ. ಬರೀ 106 ಸದಸ್ಯರು ಮಾತ್ರ ಅಲ್ಲಿಗೆ ಹೋಗಿದ್ದಾರೆ. ಆದುದರಿಂದ ಬಾಕಿ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಂಡೆ, ದಯವಿಟ್ಟು ತಾವು ಅಲ್ಲಿಗೆ ಹೋಗಿ ಫೋಟೋಗ್ರಾಫ್ಸ್ ತೆಗೆಸಿಕೊಂಡು ನಮಗೆ ಅನುಕೂಲ ಮಾಡಿಕೊಡಿ ಎಂದು ಆ ವಿಚಾರ ಅಷ್ಟೇ.

Sri Basavaraj Rayareddy : They are not interested. They want to look young.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಈ ವಿಷಯ ಸಭಾಧ್ಯಕ್ಷರಿಗೆ ಬಿಟ್ಟಿರುವಂಥದ್ದು. ಫೋಟೋಗ್ರಾಫನ್ನು ತೆಗೆಸಬೇಕೆನ್ನುವುದು ಅಧ್ಯಕ್ಷರ ಹಾಗೂ ಮತ್ತೊಬ್ಬರ ಅಭಿಪ್ರಾಯವಾಗಿದೆ. ನಾನು ಏಕೆ ಬೇಡವೆಂದು ಹೇಳಲಿ. ಮಾಟಾಳ್ ನಾಗರಾಜ್‌ರವರು ಹೇಳಿರುವಂಥದ್ದು ಬೇರೆ ಅರ್ಥ, ಒಬ್ಬೊಬ್ಬರ ಅರ್ಥ ಬೇರೆ ಬೇರೆ ಇದೆ. ಮಾನ್ಯ ಸದಸ್ಯರುಗಳು ಇಲ್ಲಿಂದ ಮೇಲಟ್ಟಕ್ಕೆ ಹೋಗಿ ಅಲ್ಲಿ ಸದಸ್ಯರಾದರೆ ಅದು ನಮಗೆ ಸಂತೋಷಕರವಾದ ಸಂಗತಿಯಾಗುತ್ತದೆ. ಆದರೆ ನಮಗೆ ಅವರನ್ನು ಬಿಟ್ಟು ಕೋಡುವುದಕ್ಕೆ ಇಷ್ಟವಿಲ್ಲ.

ನಿಯಮ 334ರ ಮೇರೆಗೆ

1) ನಾಗಮಂಗಲ ಮತ್ತು ಬೆಳ್ಳೂರು ಪಟ್ಟಣಗಳಿಗೆ ಕುಡಿಯುವ ನೀರಿನ ಸೌಕರ್ಯ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೇ, ನಾಗಮಂಗಲ ಮತ್ತು ಬೆಳ್ಳೂರು ಪಟ್ಟಣಗಳಲ್ಲಿ ಕುಡಿಯುವ ನೀರಿನ ಬವಣೆ. ಕಳೆದ ಕೆಲವು ವರ್ಷಗಳಿಂದ ಜಾಸ್ತಿಯಾಗಿದ್ದು ಕಳೆದ ವರ್ಷ ಮಾನ್ಯ ಹಣಕಾಸು ಸಚಿವರು ನಾಗಮಂಗಲಕ್ಕೆ ಬೇಟಿ ನೀಡಿದ್ದಾಗ ನಾವೆಲ್ಲರೂ ಮಾಡಿದ ಮನವಿಯ ಮೇರೆಗೆ ಅವರು ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಈ ರೀತಿ ಆದೇಶ ಕೊಟ್ಟರು. ತಕ್ಷಣವೇ ಯೋಜನೆಯನ್ನು ತಯಾರಿಸಿ ಕಳುಹಿಸಿ ಅದಕ್ಕೆ ಸಂಬಂಧಪಟ್ಟ ಹಣವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡುತ್ತೇನೆಂದು ಹೇಳಿದರು. ನಂತರ, ನಾನು ಯೋಜನೆ ಜೊತೆಯಲ್ಲಿ ನನ್ನ ಮನವಿಯನ್ನು ಜಿಲ್ಲಾ ಪರಿಷತ್ತಿನ ಮೂಲಕ ಹಣಕಾಸು ಮಂತ್ರಿಗಳಿಗೆ ತಲುಪಿಸಿದೆ. ಹಣಕಾಸು ಇಲಾಖೆ ಈ ಕೆಲಸವನ್ನು ಶೀಘ್ರ ಕೈಗೆತ್ತಿಕೊಳ್ಳಿರಿ ನಂತರ ಬರೆದು ಹಣ ತರಿಸಿಕೊಳ್ಳಿರಿ ಎಂದು 3 ಬಾರಿ ಜಿಲ್ಲಾಪರಿಷತ್ತಿಗೆ ಆದೇಶ ನೀಡಿದೆ. ಆದರೆ, 3 ಬಾರಿಯೂ ಜಿಲ್ಲಾ ಪರಿಷತ್ತಿನವರು ಕೆಲಸ ಕೈಗೆತ್ತಿಕೊಳ್ಳದೇ ಮೊದಲು ಹಣ ಕಳುಹಿಸಿ ಎಂದು ಬರೆದಿರುತ್ತಾರೆ. ಇತ್ತೀಚಿಗೆ ಬಹಳ ತೊಂದರೆ ಅನುಭವಿಸಿ, ನಾಗಮಂಗಲ ಮತ್ತು ಬೆಳ್ಳೂರು ಪಟ್ಟಣಗಳಿಗೆ ನೀರು ಟ್ಯಾಂಕ್‌ನಲ್ಲಿ ಸರಬರಾಜು ಮಾಡುತ್ತಿದ್ದೇವೆ. ಆದುದರಿಂದ, ಜಿಲ್ಲಾ ಪರಿಷತ್ತಿಗೆ ಆದೇಶ ಕೊಟ್ಟು ಹಣ ಬಿಡುಗಡೆ ಮಾಡಿ ಕೆಲಸ ಕೈಗೆತ್ತಿಕೊಳ್ಳಲು ಆದೇಶ ನೀಡಬೇಕಾಗಿ ಕೋರಿಕೆ.

ಶ್ರೀ. -ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ (ಶ್ರೀ ಬಿ. ಬಸವಲಿಂಗಪ್ಪನವರ ಪರವಾಗಿ) ನಾಗಮಂಗಲ ಪಟ್ಟಣದ ಜನಸಂಖ್ಯೆ 1981ರ ಜನಗಣತಿ ಪ್ರಕಾರ 11,084 ಇದ್ದು, ಹಾಲಿ ಜನಸಂಖ್ಯೆ ಸುಮಾರು 13,500 ಇರುತ್ತದೆ. ಸದರಿ ಪಟ್ಟಣವು ಮಂಡಲವಾಗಿ 1986ರಲ್ಲಿ ಪರಿವರ್ತಿತ ಗೊಂಡಿರುತ್ತದೆ.

ಪ್ರಸ್ತುತ ಪಟ್ಟಣದಲ್ಲಿ 35 ಕೊಳವೆ ಬಾವಿಗಳಿದ್ದು ಅವುಗಳಲ್ಲಿ 7ಕ್ಕೆ ವಿದ್ಯುತ್ ಪಂಪುಗಳನ್ನು ಮತ್ತು 28ಕ್ಕೆ ಕೈ ಪಂಪುಗಳನ್ನು ಅಳವಡಿಸಲಾಗಿದೆ. ವಿದ್ಯುತ್ ಪಂಪು ಜೋಡಿಸಿದ 3 ಕೊಳವೆ ಭಾವಿಗಳಲ್ಲಿ ನೀರಿನ ಉತ್ಪತ್ತಿ ಕಡಿಮೆಯಾಗಿ ನಿರುಪಯುಕ್ತವಾಗಿದೆ. ಪ್ರಸ್ತುತ ಪಟ್ಟಣದಲ್ಲಿ ಸುಮಾರು 4ಲಕ್ಷ ಲೀಟರ್ ನೀರು ಪೂರೈಸಲಾಗುತ್ತಿದ್ದು ಇದು ತಲ ದಿನಂಪ್ರತಿ ಸುಮಾರು 30 ಲೀಟರ್ ನೀರು ಪೂರೈಕೆಗೆ ಸಮನಾಗುತ್ತದೆ.

ಪಟ್ಟಣದ ಕುಡಿಯುವ ನೀರಿನ ಬವಣೆ ನಿವಾರಿಸಲು 1990-91ರ ಅಭಾವ ಕಾರ್ಯಕ್ರಮದಲ್ಲಿ 5 ಕೊಳವೆ ಭಾವಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ ಒಂದು ಕೊಳವೆಬಾವಿಯಲ್ಲಿ ಪ್ರತಿ ಗಂಟೆಗೆ 45 ಸಾವಿರ ಲೀಟರ್ ನೀರಿನ ಉತ್ಪತ್ತಿ ಇದ್ದು ಈ ಕೊಳವೆ ಬಾವಿಗೆ ವಿದ್ಯುತ್ತು ಪಂಪು ಅಳವಡಿಸಲು ಮಾನ್ಯ ಶಾಸಕರು